ದವರು ತಮ್ಮ ಕಾರ್ಖಾನೆಗಳಲ್ಲಿಯೇ ಇವುಗಳನ್ನು ಉತ್ಪಾದನೆ ಮಾಡಿ ಕಡಿಮೆ ಬೆಲೆಗೆ ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರ ? ಈ ರೀತಿ ಮಾಡುವುದಾಗಿ ಸರ್ಕಾರದವರು ಈ ಮೊದಲು ಆಶ್ವಾಸನೆ ಕೊಟ್ಟಿದ್ದರು. ಅದನ್ನು ತಾವು ಪರಿಶೀಲನೆಮಾಡಿ ಕಾರ್ಯರೂಪಕ್ಕೆ ತರುತ್ತೀರಾ ?

ಶ್ರೀ ಬಿ. ಸುಬ್ಬಯ್ಯಶೆಟ್ಟಿ — ಈಗ ಹೆಚ್ಚಿನ ಪಂಪುಸೆಟ್ಟುಗಳಿಗೆ ಈ ಕೆಪಾಸಿಟರುಗಳನ್ನು ಹಾಕುವ ಪ್ರಮೇಯವೇ ಬರುವುದಿಲ್ಲ ಇನ್ನು ಬಾಕಿ ತಮ್ಮ ಸಲಹೆ ಏನಿದೆ I think we can examine it. I would not be able to tell the right answer now.

ಶ್ರೀ ಕೆ ಎಂ ದೊರೆಸ್ವಾಮಿ ನಾಯ್ಡು.—ನನ್ನ ಮೂರನೇ ಪ್ರಶ್ನೆಗೆ ಉತ್ತರವಾಗಿ ಪರಿಶೀಲಿಸಲಾಗುವುದೆಂದು ಹೇಳಿದ್ದೀರಿ. ಅಂದರೆ ಇದನ್ನು ಪರಿಶೀಲನೆ ಮಾಡಲು ಎಷ್ಟು ತಿಂಗಳು ಬೇಕು ಅಥವಾ ಎಷ್ಟು ವರ್ಷಗಳು ಬೇಕು ?

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಅದಷ್ಟು ಶೀಘ್ರವಾಗಿ ಮಾಡುತ್ತೇವೆ.

Rectification of V.P. Street Lights

503. SRI K. M. DORESWAMY NAIDU (Bethamangala).—Will the Minister of State for Information and Power be pleased to state :—

(*a*) the persons responsible for rectifying the V.P. Street lights if they go out of order due to loose contact, etc.;

(*b*) whether any charge would be levied by the department for repairing the loose contact, etc., of V. P. Street Lights ; if so, the rates prescribed for different types of repairs ;

(*c*) whether any charge would be levied by the department for replacing tube lights installed in the V P. Offices if it goes out of order ; if so, the rate prescribed for each of such replacements ;

(*d*) the charge levied for disconnection of V. P. insulators ;

(*e*) the number of Villages for which a lineman has been provided and the nature of work he has to attend to ?

SRI B. SUBBAIAH SHETTY (Minister of State for Information and Power) –

(*a*) Karnataka Electricity Board.

(*b*) No.

(*c*) Yes, at the following rates :—

(1) Incandescent Lamps	...	Rs. 0–50
(2) Fourescent or Mercury vapour lamps	...	Rs. 1–00

(*d*) No charge is levied for disconnection. But reconnection charges are levied as under :

Low Tension Service :

A. Single phase supply :

(i) On Meter Boards	...	Rs. 5–00

(ii) On the pole and wall mounted boxes ... Rs. 10-00

B. Three phase supply :

(i) On meter boards ... Rs. 10-00

(ii) On the pole ... Rs. 20-00

(iii) On Pillar Boxes ... Rs. 30-00

(*e*) Posting of lineman does not depend on the No. of villages but it depends upon the number of installations, length of HT and LT lines in the area.

Duties of the lineman are :

1. Patrolling of lines.
2. Service connection works.
3. Switch On and Off street light.
4. Replacing street bulbs.
5. Line works and Painting works.
6. Assisting wireman and line mechanics in line inspection and maintenance works of lines.
7. Attending to fuse off calls and rectification of faults on lines.
8. Attending to telephones, Board shift duties and cleaning of equipments.
9. Assisting other staff.
10. Maintaining daily and records on camp duties.
11. Any other work the head of the office may assign.

ಶ್ರೀ ಕೆ.ಎಂ. ದೊರೆಸ್ವಾಮಿನಾಯ್ಡು.—ಸ್ಟ್ರೀಟ್ ಲೈಟ್ ಸರಿಯಾಗಿ ಉರಿಯುದೇ ಲೂಜು ಕಾಂಟೆಕ್ಟ್ ಆದರೆ ಅವುಗಳನ್ನು ಸರಿಪಡಿಸಲು 5 ರೂ. ಚಾರ್ಜ್ ಮಾಡುತ್ತಾರೆ. ಒಂದು ಬರ್ನ್ ಹೋದರೆ ಮತ್ತೊಂದು ಹಾಕಲು 5 ರೂ. ಚಾರ್ಜ್ ಮಾಡುತ್ತಾರೆ. ಆದರೆ ಇಲ್ಲಿ ಉತ್ತರ ಕೊಡುವಾಗ ಪ್ರಜ್ವಲಿಸುವ ವಿದ್ಯುತ್ ದೀಪವಾದರೆ 5ರ ಪೈಸೆ ಪ್ರೊಪೋರ್ಷನೆಂಟ್ ಅಥವಾ ಪೆರ್‌ಕ್ಯುರಿ ವೇಪರ್ ಲಾಂಪ್ ಆದರೆ ಒಂದು ರೂ ಎಂದು ಹೇಳಿದ್ದೀರಿ. ಇದರಲ್ಲಿ ಯಾವುದು ಸರಿ ?

† ಶ್ರೀ ಬಿ. ನುಬ್ಬಯ್ಯ ಶೆಟ್ಟಿ.—ಇಲ್ಲಿ ಉತ್ತರದಲ್ಲಿ ಏನು ದರಗಳನ್ನು ಕೊಡಲಾಗಿದೆ, ಅದೇ ಸರಿ.

ಶ್ರೀ ಸಿ. ಬೈರೇಗೌಡ.—ಬೀದಿ ದೀಪಗಳನ್ನು ಹೊಸದಾಗಿ ಹಾಕಿದರೆ ಅವು ಒಂದೆರಡು ತಿಂಗಳುಗಳಲ್ಲಿಯೇ ಹಾಳಾಗುತ್ತಿರುವುದರು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ನುಬ್ಬಯ್ಯ ಶೆಟ್ಟಿ.—ಬಂದಿಲ್ಲ.

ಶ್ರೀ ಕೆ.ಎಂ. ದೊರೆಸ್ವಾಮಿ ನಾಯ್ಡು.—ಪೋಲ್ ಕಟ್ಟುವುದು ನಿಧಾನವಾದರೆ ಡಿಸ್-ಕನೆಕ್ಟ್ ಮಾಡುತ್ತಾರೆ, ನಂತರ ದುಡ್ಡು ಕಟ್ಟಿದರೆ ರೀಕನೆಕ್ಷನ್ ಕೊಡುತ್ತಾರೆ ಇದಕ್ಕೆ ಎಷ್ಟು ಚಾರ್ಜ್ ಮಾಡುತ್ತೀರಾ ಎಂದು ನಾನು ಪ್ರಶ್ನೆ ಕೇಳಿದ್ದು. ಆದರೆ ಇಲ್ಲಿ 5 ರೂ.ಗಳಿಂದ ಹಿಡಿದು 30 ರೂ ಗಳವರೆಗೆ ವಿವಿಧ ರೀತಿಯ ಚಾರ್ಜುಗಳನ್ನು ತೋರಿಸಿದ್ದಾರೆ. ಇದು ನನಗೆ ಅರ್ಥವಾಗಲಿಲ್ಲ. ಇದನ್ನು ಸ್ವಲ್ಪ ವಿಶದವಾಗಿ ತಿಳಿಸಬೇಕು.

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಡಿಸ್-ಕನೆಕ್ಷನ್‌ಗೆ ನಾವು ಚಾರ್ಜ್ ಮಾಡುವುದಿಲ್ಲ. ಆದರೆ ರೀಕನೆಕ್ಷನ್‌ಗೆ ಯಾವಯಾವ ಪಾಯಿಂಟ್‌ನಲ್ಲಿ ಎಷ್ಟೆಷ್ಟು ಚಾರ್ಜ್ ಮಾಡಲಾಗುತ್ತದೆಂಬುದನ್ನು ಉತ್ತರದಲ್ಲಿ ಕೊಟ್ಟಿದೆ.

Loss in Silk Filatures.

574. SRI J. L. KABADE (Balloli).—Will the Minister of State for Sericulture be pleased to state —

(*a*) whether the Government would state as to since when the affairs leading to loss of Rs. 7 crores in the Silk Filatures have gone on as stated by the Minister of State for Sericulture Sri Sriramulu to the press;

(*b*) the date on which Sri Sriramulu was appointed as Chairman of the Board of Management of Silk Filature Board;

(*c*) whether the Ex-State Minister of Sericulture Sri S. B. Nagaral was the chairman of the said Board;

(*d*) whether it is a fact that the Chief Minister made a statement to the press that there is no relationship between person being a Minister and the Chairman of the Board of Management of the Silk Filature ?

SRI K. SRIRAMULU (Minister of State for Sericulture).—

(*a*) From 1965

(*b*) The Sericulture Minister is the Chairman of the Board of Management of Silk Filature. He will be the Chairman of the said Board from the date he assumes charge as Minister of Sericulture.

(*c*) Yes.

(*d*) No paper has published a statement like that. But in Kannada Prabha it is published as follows.—

> "I have to verify the matter and it has to be enquired into."

But there is no relationship between the authority of the Minister and this matter."

ಶ್ರೀ ಜೆ. ಎಲ್. ಕಬಾಡೆ — ನನ್ನ (೫೭೪) ಪ್ರಶ್ನೆಗೆ ಕೊಟ್ಟಿರುವ ಉತ್ತರವನ್ನು ನೋಡಿದರೆ, ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟಿದ್ದು ಇದೆ ಎಂಬುದು ತಿಳಿಯುತ್ತದೆ. ಇಲ್ಲಿ 7 ಕೋಟಿ ರೂ. ಗಳು ನಷ್ಟವಾಗಿದೆ ಎಂದು ತಾವು ಹೇಳಿದಾಗ, ಇದನ್ನು ತನಿಖೆ ಮಾಡಲು ಏನಾದರು ಎನ್‌ಕ್ವೈರಿ ಕಮೀಷನ್ ನೇಮಕ ಮಾಡಿದ್ದೀರಾ ?

† ಶ್ರೀ ಕೆ. ಶ್ರೀರಾಮುಲು.—ಮಾಡಿಸುತ್ತೇವೆಂದು ಈಗಾಗಲೇ ಹೇಳಿದ್ದೇನೆ.

ಶ್ರೀ ಜೆ. ಎಲ್. ಕಬಾಡೆ.—ತಾವು ಹೇಳಿದ್ದು ಯಾವಾಗ ಮತ್ತು ಮಾಡುವುದು ಯಾವಾಗ ?